Downloaded From : http://cbseportal.com/

# KANNADA CODE: 015
## 2017 – 18
# MARKING SCHEME

**SUBJECT : KANNADA** **CLASS : X**

**ಅನುಮತಿಸಲಾದ ಸಮಯ : ೩ಗಂಟೆ** **ಗರಿಷ್ಠ ಅಂಕಗಳು : ೮೦**

Time allowed : 3 hours. Maximum Marks : 80

**ಸೂಚನೆಗಳು : ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.**

## A – (Reading Section) : 12 Marks
### ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**ಪ್ರಶ್ನೆ 1. 1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ**

1) ಕಾಡಿನ ನಾಶದಿಂದ ಮಳೆ ಕಡಿಮೆಯಾಗುತ್ತಿರುವುದರಿಂದ ಅಂತರ್ಜಲ ಕಡಿಮೆಯಾಗುತ್ತಿದೆ. **1**
2) ಮಾನವ ಬದುಕಿಗೆ ಗಾಳಿ, ಬೆಳಕು ಮತ್ತು ನೀರು ಅಗತ್ಯವಾಗಿದೆ. **1**
3) ಕಾರ್ಖಾನೆಗಳ ಹೊಗೆಯಿಂದ ವಾಯುಮಾಲಿನ್ಯವಾಗುತ್ತದೆ. ಅವುಗಳ ಕೊಳಚೆ ನೀರು ನದಿಯನ್ನು ಸೇರುವುದರಿಂದ ಜಲಮಾಲಿನ್ಯ ಉಂಟಾಗುತ್ತದೆ. **2**
4) ಒಂದೊಂದು ಹನಿ ನೀರನ್ನೂ ಕಾಪಾಡಬೇಕು. ನೀರನ್ನು ವ್ಯರ್ಥವಾಗಿ ಪೋಲು ಮಾಡದೆ, ಜಲಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ ಎಂದು ಅರಿತು, ಆ ದಿಸೆಯಲ್ಲಿ ಪ್ರಯತ್ನಶೀಲರಾದಾಗ ಜಲಸಮಸ್ಯೆ ಪರಿಹಾರವಾಗುತ್ತದೆ. **2**

**2. ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

1) ಜಿಪುಣ ಕಾಲ. **1**
**2)** ಜಿಪುಣನಿಗೆ ವಂದಿಮಾಗಧರು ಸೂರ್ಯ ಚಂದ್ರರು. **1**
3) ಕಾಲವನ್ನು ಮರೆಯಲಾಗುವುದಿಲ್ಲ. ಏಕೆಂದರೆ ಅವನು ಗಂಟೆ ಬಡಿದು, ಕನ್ನಡಿ ಹಿಡಿದು ಬೆನ್ನು ಹತ್ತಿದ ಬೇತಾಳದಂತೆ ಕಾಡುತ್ತಾನೆ. **2**
4) ಕಾಲದ ಕಬಂಧನಿಗೆ ತುಂಬದ ಹೊಟ್ಟೆಯಾಗಿದೆ. ಆದ್ದರಿಂದ ಆತ ದಿಗಂತದವರೆಗೆ ಕೈಚಾಚಿ, ಸಿಕ್ಕಿದ್ದನ್ನೆಲ್ಲ ಬಾಚಿ ಜೀರ್ಣಿಸಿಕೊಳ್ಳುವುದರಿಂದ ಕಾಲನನ್ನು ಮನೆಹಾಳ ಎಂದು ಕರೆಯಲಾಗಿದೆ. **2**

## B – (Writing Section) : 15 Marks
### ವಿಭಾಗ – ಬಿ (ಬರವಣಿಗೆಯ ಕೌಶಲ) : 15 ಅಂಕಗಳು

**ಪ್ರಶ್ನೆ ೨. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **6**

ಪ್ರಬಂಧದ ಅಂಕ ನೀಡಿಕೆ ಹೀಗಿದೆ : ಪೀಠಿಕೆ–½, ವಿಷಯ, ವಸ್ತು–3, ಭಾಷಾಶೈಲಿ–1, ಪ್ರಸ್ತುತಿ–1, ಉಪಸಂಹಾರ–½.

**ಪ್ರಶ್ನೆ 3. ಪತ್ರ :** ಅಂಕ ನೀಡಿಕೆ ಹೀಗಿದೆ : ಗೆ – ವಿಳಾಸ–½, ಇಂದ–ವಿಳಾಸ–½, ದಿನಾಂಕ–½, ಮಾನ್ಯರೇ–½, ವಿಷಯ–½, ಪತ್ರದ ಒಡಲು–2, ಮುಕ್ತಾಯ: ಇಂತಿ ನಿಮ್ಮ ವಿಶ್ವಾಸಿ ಮತ್ತು ಸಹಿ–½. **5**

**ಅಥವಾ**

**ಅರ್ಜಿ/ಮನವಿ ಪತ್ರ :** ಅಂಕ ನೀಡಿಕೆ ಹೀಗಿದೆ : ಗೆ – ವಿಳಾಸ–½ , ಇಂದ–ವಿಳಾಸ–½, ದಿನಾಂಕ–½, ಮಾನ್ಯರೇ–½, ವಿಷಯ–½, ಪತ್ರದ ಒಡಲು–2, ಮುಕ್ತಾಯ: ಇಂತಿ ನಿಮ್ಮ ವಿಶ್ವಾಸಿ ಮತ್ತು ಸಹಿ–½.



Downloaded From : http://cbseportal.com/ Courtesy : CBSE

Downloaded From : http://cbseportal.com/

**ಪ್ರಶ್ನೆ 4. ವರದಿ** : ಅಂಕ ನೀಡಿಕೆ ಹೀಗಿದೆ : ಶೀರ್ಷಿಕೆ–½, ದಿನಾಂಕ–½, ಸ್ಥಳ–½, ವರದಿಯ ಒಡಲು/ವಿವರಣೆ–2, ವರದಿಗಾರರ ರುಜು–½.

**4**

## C – (Grammar) : 18 Marks

### ವಿಭಾಗ – ಸಿ (ಅನ್ವಯಿಕ ವ್ಯಾಕರಣ) : 18 ಅಂಕಗಳು

**ಪ್ರಶ್ನೆ ೫. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ.**

**1.** ತತ್ಸಮ/ತದ್ಭವಗಳು : ಪರ್ವ, ಹಸಾದ. **1**

**2.** ಸಮಾನಾರ್ಥಕ ಪದಗಳು : ರವಿ/ಆದಿತ್ಯ/ಭಾನು ರಕ್ತ/ರುಧಿರ. **1**

**3.** ವಿರುದ್ಧ ಪದ : ನರಕ, ಅಪನಂಬಿಕೆ. **1**

**4.** ಗ್ರಾಂಥಿಕ ರೂಪ : ಮೇಲೆ, ಕೊಡುತ್ತೇವೆ. **1**

**5.** ನಾನಾರ್ಥ: ಋಷಿ, ಸಾಧು, ಸನ್ಯಾಸಿ. ಕೋಪ, ಸಿಟ್ಟು. **1**

**6.** ವಿಭಕ್ತಿ ಪ್ರತ್ಯಯ : ಕಲಹ+ಅಂ=ದ್ವಿತೀಯಾ ವಿಭಕ್ತಿ, ರಾಮ+ಇಗೆ=ಚತುರ್ಥಿ ವಿಭಕ್ತಿ. **1**

**7.** ಇವುಗಳಲ್ಲಿ ದ್ವಿರುಕ್ತಿ – ದೊಡ್ಡದೊಡ್ಡ ಮತ್ತು ಜೋಡುನುಡಿ – ಕೆನೆಮೊಸರು, . **1**

**8.** 'ರವಿ ಶಾಲೆಗೆ ಹೋಗುವನು' – ಭವಿಷ್ಯತ್ ಕಾಲ. **1**

**9.** 'ಅನ್ನವು ಭೀಮನಿಂದ ಉಣ್ಣಲ್ಪಟ್ಟಿತು' **1**

**10.** 'ಮಕ್ಕಳು ಶಾಲೆಗೆ ಹೋಗರು' **1**

**11.** ಸ್ವಂತ ವಾಕ್ಯದಲ್ಲಿ : 1. ಬಸವಣ್ಣನವರು ಸಮಾಜ ಸುಧಾರಣೆಯ ಹರಿಕಾರರಾಗಿದ್ದರು.
2. ರಾಜಕಾರಣಿಗಳು ಚುನಾವಣೆಯಲ್ಲಿ ಗೆಲ್ಲಲು ಅನೇಕ ಕಸರತ್ತುಗಳನ್ನು ಮಾಡುತ್ತಾರೆ. **2**

**12.** ಸಂಧಿ : ಮಹಾ+ಋಷಿ=ಗುಣ ಸಂಧಿ, ನೆತ್ತರು+ಒಂದು=ಲೋಪ ಸಂಧಿ. **2**

**13.** ಸಮಾಸ : ಕೈಯ+ಅಡಿ=ಅಂಶಿ ಸಮಾಸ, ಸೊಲ್ಲನ್ನು ಕೇಳಿ=ಕ್ರಿಯಾ ಸಮಾಸ. **2**

**14.** ಗಾದೆ ಮಾತನ್ನು ವಿಸ್ತರಣೆ : ಅಂಕ ನೀಡಿಕೆ ಹೀಗಿದೆ ಪೀಠಿಕೆ/ಹೊರ ಅರ್ಥ–½, ಒಳ ಅರ್ಥ–1, ಭಾಷಾ ಶೈಲಿ–½. **2**

## D – Literature Section : (Text – Part 1 – Prose and Poetry) : 35 Marks

### ವಿಭಾಗ – ಡಿ (ಪಠ್ಯಗಳ ಅಧ್ಯಯನ) : 35 ಅಂಕಗಳು

**ಪ್ರಶ್ನೆ 6. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 10**

1. ದನು
2. ಅರಗಿನ ಮನೆ
3. ಸಿದ್ಧಲಿಂಗಯ್ಯ
4. ಅರಣ್ಯಕ.
5. ವಿಕ್ರಮಾರ್ಜುನ ವಿಜಯ
6. ಅಂಬಿಕಾತನಯದತ್ತ
7. ಬಾಗಲಕೋಟೆ
8. ಗುರುವಾರ
9. ದ್ರೋಣ
10. ಪಟ್ಟಣ



Downloaded From : http://cbseportal.com/ Courtesy : CBSE

Downloaded From : http://cbseportal.com/

**ಪ್ರಶ್ನೆ 7. ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** **3 X4=12**

1. ಗೊರೂರರು ವಿದ್ಯುತ್ ಒಲೆಯಿಂದ ಬರುತ್ತಿದ್ದ ಶಬ್ದ ನಿಲ್ಲಿಸಲು ಯಾವ ಸ್ವಿಚ್ ಆಫ್ ಮಾಡಬೇಕೆಂದು ತಿಳಿಯದೆ ಅವರ ಹೆಂಡತಿ ಹೇಳಿದ ಪ್ರಕಾರ ಹತ್ತಿರದ ಸ್ಕೂಲಿಗೆ ಹೋಗಿ ಯಾರದಾದರೂ ಸಹಾಯ ಪಡೆಯಲು ಯತ್ನಿಸಿದರು. ಆಗ ಅವರ ವೇಷಭೂಷಣಗಳು ಅಮೆರಿಕದ ಮಕ್ಕಳಿಗೆ ವಿಚಿತ್ರವಾಗಿ ಕಂಡವು. ಅಂತಹ ವೇಷಭೂಷಣಗಳನ್ನು ಅವರು ಹಿಂದೆಂದೂ ಕಂಡಿರಲಿಲ್ಲ. ಅವರ ಆಕಾರ ಕೂಡ ದೈತ್ಯ ಗಾತ್ರದ್ದಾಗಿತ್ತು. ಅವರ ಇಂತಹ ವಿಚಿತ್ರ ವೇಷವನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡು ಓಡಿಹೊದರು.
2. ''ಈತನ ಮಾತು ಅಶ್ರುತಪೂರ್ವಮ್'' – ಸಂದರ್ಭ : ಪಾಠ – ವೃಕ್ಷಸಾಕ್ಷಿ. ½

   ಕೃತಿಕಾರ – ದುರ್ಗಸಿಂಹ ½

   ಈ ಮಾತನ್ನು ಗ್ರಾಮದ ಮುಖ್ಯಸ್ಥರು ಹೇಳಿದರು. ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ವಂಚಿಸಿ, ಆತನ ಮೇಲೆ ಆರೋಪ ಹೊರಿಸಿ, ಅದಕ್ಕೆ ವೃಕ್ಷವೇ ಸಾಕ್ಷಿ, ಅದರ ಮಾತಿನಂತೆ ನ್ಯಾಯ ಕೊಡಿಸಿ ಎಂದಾಗ ಈ ವಾಕ್ಯವನ್ನು ಜನರು ಹೇಳಿದರು. 2

   **ಅಥವಾ**

   ''ನಾನು ಮುಖ ಮೇಲಾಗಿ ಬಿದ್ದಿದ್ದೆನೆ?'' - ಸಂದರ್ಭ : ಪಾಠ – ವ್ಯಾಘ್ರಗೀತೆ

   ಲೇಖಕರು : ಎ. ಎನ್. ಮೂರ್ತಿರಾವ್.

   ಶಾನುಭೋಗರು ಗ್ರಾಮಸ್ಥರಿಗೆ ಹೇಳಿದರು.

   ಶಾನುಭೋಗರು ಬೆನ್ನು ಮೇಲೆಮಾಡಿ ಮಲಗಿದ್ದರು. ಗ್ರಾಮಸ್ಥರ ಎತ್ತಿನ ಗಂಟೆಯ ಶಬ್ದ ಕೇಳಿ, ಹುಲಿ ಓಡಿ ಹೋಯಿತು. ಚೇತರಿಸಿಕೊಂಡ ಶಾನುಭೋಗರು ಎತ್ತಿನ ಗಾಡಿಯವರನ್ನು ಕುರಿತು ಹೀಗೆ ಹೇಳಿದರು.
3. ಹಕ್ಕಿಯು ಯುಗಯುಗಗಳ ಹಣೆಬರಹವನ್ನು ಅಳಿಸಿಹಾಕಿದೆ. ಪರಿವರ್ತನೆಯ ಮೂಲಕ ಹೊಸ ಭಾಗ್ಯೋದಯವಾಗುವಂತೆ ಮಾಡುತ್ತಿದೆ. ಚೈತನ್ಯಯುಕ್ತರನ್ನಾಗಿಸಿ ಹೊಸಕಾಲದ ಹಸುಮಕ್ಕಳನ್ನು ತುಂಬುಹೃದಯದಿಂದ ಹರಸುತ್ತಿದೆ. 3
4. "ಜಾನಕಿಯ ಮಗನಿದಕೆ ಬೆದರುವನೆ?" ಸಂದರ್ಭ : ಪದ್ಯ – ವೀರಲವ ½

   ಕವಿ : ಲಕ್ಷ್ಮೀಶ ½

   ಲವನು ಋಷಿಕುಮಾರರಿಗೆ ಹೇಳಿದನು.

   ರಾಮನ ಯಜ್ಞದ ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿಹಕಿದಾಗ ಹೆದರಿದ ಋಷಿಕುಮಾರರು ಅದನ್ನು ಬಿಡಲು ಹೇಳಿದರು. ಆಗ ಲವನು ಬ್ರಾಹ್ಮಣರ ಮಕ್ಕಳಾದ ನೀವು ಹೆದರಬಹುದು. ಆದರೆ ಜಾನಕಿಯ ಮಗನಾದ ನಾನು ಹೆದರುವುದಿಲ್ಲ ಎಂದನು. ಲವನ ಪರಾಕ್ರಮವನ್ನು ಇಲ್ಲಿ ಕಾಣಬಹುದು.

   **ಅಥವಾ**

   "ಗೆರೆ ಎಳೆದು ಗಡಿ ಎಂದ" : ಸಂದರ್ಭ : ಪದ್ಯ–ಸಂಕಟಕೆ ಗಡಿಯಿಲ್ಲ ½

   ಕವಯಿತ್ರಿ – ದು. ಸರಸ್ವತಿ ½

   ಕವಯಿತ್ರಿ ಹೇಳುವ ಮಾತು.

   ಬುದ್ಧಿವಂತನಾದ ಮಾನವ ತಾನೇ ಈ ಮಣ್ಣಿನ ಮಾಲಿಕನೆಂಬ ಅಹಂಕಾರದಿಂದ ಗೆರೆ ಎಳೆದು ಗಡಿ ನಿರ್ಮಿಸಿ, ಕಾದಾಟಗಳಾಗಿ ಎರಡೂ ಕಡೆ ನೆತ್ತರು ಹರಿದು ಶವವಾದುದನ್ನು ತಿಳಿಸುವಾಗ ಈ ಮಾತು ಬಂದಿದೆ.

**ಪ್ರಶ್ನೆ 8. ಈ ಕೆಳಗಿನ ಪ್ರಶ್ನೆಗಳಿಗೆ 7-8 ವಾಕ್ಯಗಳಲ್ಲಿ ಉತ್ತರಿಸಿರಿ.** **4 X2=8**

1. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ೧೯೧೩ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು.

   ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣದಿಂದ ಪ್ರೌಢಶಿಕ್ಷಣ ಶಾಲೆಗಳನ್ನು ಬಿಡುಗಡೆಗೊಳಿಸಿದರು.

   ಮೈಸೂರು ವಿ. ವಿ. ಸ್ಥಾಪನೆ.

   ತಾಂತ್ರಿಕ ಶಿಕ್ಷಣ ಸಂಸ್ಥೆ ಸ್ಥಾಪನೆ.



Downloaded From : http://cbseportal.com/ Courtesy : CBSE

Downloaded From : http://cbseportal.com/

ಸಂಸ್ಥಾನವೇ ಪ್ರೌಢ ಶಿಕ್ಷಣದ ಅಂತಿಮ ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆ ಮಾಡಿದರು.
ಮಹಿಳೆಯರಿಗಾಗಿ ಗೃಹ ಶಿಕ್ಷಣ ಶಾಲೆಗಳ ಸ್ಥಾಪನೆ.
ಗ್ರಂಥಾಲಯಗಳ ಸ್ಥಾಪನೆ.
ವಿದ್ಯಾರ್ಥಿವೇತನ ನೀಡುವ ಮೂಲಕ ಹಿಂದುಳಿದ ವರ್ಗಕ್ಕೆ ಪ್ರೋತ್ಸಾಹ.

**ಅಥವಾ**

ಬುಕ್ಕರಾಯನ ಆಡಳಿತದಲ್ಲಿ ಜೈನಧರ್ಮದವರು ಶ್ರೀವೈಷ್ಣವರಿಂದಾಗುತ್ತಿದ್ದ ತೊಂದರೆಯಮ್ನು ಬಿನ್ನವಿಸಿಕೊಂಡಾಗ ಬುಕ್ಕರಾಯನು ಶ್ರೀವೈಷ್ಣವ ದೇವಾಲಯದ ಪ್ರಮುಖ ಆಚಾರ್ಯರನ್ನು, ಬೇರೆಬೇರೆ ಜನಾಂಗಗಳ ಪ್ರತಿನಿಧಿಗಳ ಸಭೆಯನ್ನು ಸೇರಿಸಿ, ಎರಡೂ ಧರ್ಮಗಳ ನಡುವೆ ಯಾವ ಭೇದವಿಲ್ಲವೆಂದು ಮನವರಿಕೆ ಮಾಡಿಸಿ ಜೈನಧರ್ಮಕ್ಕೆ ಪಂಚಮಹಾವಾದ್ಯಗಳೂ, ಕಳಶದ ಮೊದಲ ಗೌರವ ಸಲ್ಲುವ ವ್ಯವಸ್ಥೆ ಮಾಡಿದನು. ಯಾವ ಧರ್ಮಕ್ಕೆ ಲಾಭ ನಷ್ಟವುಂಟಾದರೂ ಅನ್ಯ ಧರ್ಮದವರು ಅದನ್ನು ತಮ್ಮ ಲಾಭ ನಷ್ಟವೆಂದು ಪರಿಗಣಿಸಿ ಒಂದು ಧರ್ಮದವರು ಇನ್ನೊಂದು ಧರ್ಮದವರನ್ನು ರಕ್ಷಿಸಬೇಕು. ಪ್ರತಿಯೊಂದು ಮನೆಯಿಂದ ವಾರ್ಷಿಕ ಒಂದು ಹೊನ್ನಿನಂತೆ ಸಂಗ್ರಹಿಸಿ ವೈಷ್ಣವ ದೇವಾಲಯಗಳ ರಕ್ಷಣೆ ಮತ್ತು ಕಾವಲಿನ ವ್ಯವಸ್ಥೆ ಹಾಗೂ ಉಳಿದ ಹಣದಿಂದ ಹಾಳಾದ ಜಿನಾಲಯಗಳನ್ನು ಸರಿಪಡಿಸಬೇಕು ಎಂದು ಹೇಳಿ ಧರ್ಮಸಮದೃಷ್ಟಿಯನ್ನು ಆಚರಣೆಗೆ ತಂದರು.

2. ಕರ್ಣನಿಗೆ ಪಾಂಡವರು ತನ್ನ ಸಹೋದರರೆಂದು ತಿಳಿದಾಗ ಆಘಾತವಾಯಿತು. ಅವನ ಉತ್ಸಾಹ ಕುಗ್ಗಿ ದಿಕ್ಕು ತೋಚದಂತಾಯಿತು. ಒಡೆಯನನ್ನು ನೆನೆದು ದುಃಖದಿಂದ ಕೊರಳ ಸೆರೆ ಉಬ್ಬಿ, ಕಣ್ಣೀರು ಸುರಿಯಿತು. ಕೃಷ್ಣನೊಂದಿಗಿನ ಹಗೆತನ ಪರಿಣಾಮವನ್ನು ತೋರದೇ ಇರದು ಎಂದು ಖಚಿತಯಾಯಿತು, ಮನದಲ್ಲಿ ಕೊರಗಿದನು. ಪಾಂಡವರನ್ನು ಕೊಲ್ಲುವಂತಿಲ್ಲ, ಅವರು ಬದುಕಿದರೆ ಕೌರವನಿಗೆ ಉಳಿಗಾಲವಿಲ್ಲ. ಕೃಷ್ಣನು ಎಂತಹ ಸ್ಥಿತಿಯನ್ನು ತಂದಿಟ್ಟ ಎಂದು ತನ್ನ ಒಡೆಯ ದುರ್ಯೋಧನನಿಗಾಗಿ ಮರುಗಿದನು.

**ಅಥವಾ**

ಸುತ್ತಲೂ ಎಲ್ಲೆಲ್ಲೂ ಆವರಿಸಿರುವ ಅಜ್ಞಾನ, ಅಸಹನೆ, ದೌರ್ಜನ್ಯ ಮುಂತಾದ ಕತ್ತಲೆಯನ್ನು ನಿವಾರಿಸಲು ಪ್ರೀತಿ ಎಂಬ ದೀಪವನ್ನು ಹಚ್ಚಬೇಕು. ಯುದ್ಧಭೀತಿಯ ಬಿರುಗಾಳಿಗೆ ಸಿಕ್ಕ ವಿಶ್ವವೆಂಬ ಹಡಗನ್ನು ಎಚ್ಚರಿಕೆಯಿಂದ ಮುನ್ನಡೆಸಬೇಕು. ಮಲಿನವಾಗಿರುವ ನದಿಗಳ ನೀರನ್ನು ಸ್ವಚ್ಛವಾಗಿರಿಸಬೇಕು. ಒಣಗಿದ ಕಾಡುಮೇಡನ್ನು ಹಸಿರಾಗಿಸಬೇಕು. ಕೆಳಗೆ ಬಿದ್ದವರನ್ನು ಮೇಲೆತ್ತಿ ಹೊಸ ಭರವಸೆಗಳನ್ನು ಮೂಡಿಸಿ ವಿರೋಧಗಳನ್ನು ನಾಶಮಾಡಿ, ಪರಸ್ಪರ ಸಂಬಂಧ, ಸಂಪರ್ಕ ಬೆಳೆಸಬೇಕು. ವಿಭಿನ್ನ ವಿಚಾರಗಳು ಮಾರ್ಗದರ್ಶನ ಮಾಡುತ್ತವೆಂದು ತಿಳಿಯಬೇಕು. ಭಯ; ಸಂದೇಹ ದೂರವಾಗಿಸಿ, ಕಂದಿದ ಕಣ್ಣಿನಲ್ಲಿ ಸುಂದರ ಕನಸುಗಳನ್ನು ಬಿತ್ತಬೇಕು.

## Part 2 : Nondetailed : (5 Masrks)

## (ಪಠ್ಯ ಪೋಷಕ ಅಧ್ಯಯನ )

**ಪ್ರಶ್ನೆ 9. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ.** **1X5 =5**

1. ಕೈಗಡಿಯಾರವೊಂದು ಶೂನ್ಯದಲ್ಲಿ ಸೃಷ್ಟಿಯಾಗುತ್ತದೆ ಎನ್ನುವ ಮೂರ್ಖತನದ ಅಭಿಪ್ರಾಯಗಳನ್ನು ವಿದ್ಯಾವಂತರೂ ಸಹ ವ್ಯಕ್ತಪಡಿಸಿದರೆ ವೈಜ್ಞಾನಿಕ ಸಂಶೋಧನೆಗಳು ಅರ್ಥರಹಿತವಾಗುತ್ತವೆ.
2. ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ ಶಿಕ್ಷಣದ ಅವಶ್ಯಕ ಅಂಶವಾಗಿದೆ.
3. ಕುರುಡು ವಾತ್ಸಲ್ಯದಿಂದ ಬುದ್ಧಿ ಕಳೆದುಕೊಂಡು ಸರ್ವ ನಾಶವಾದವು. ವಿವೇಕದಿಂದ ವರ್ತಿಸಿದ್ದರೆ ಅಪಾಯದಿಂದ ಪಾರಾಗಬಹುದಿತ್ತು, ಸಂಸಾರದಲ್ಲಿ ಸಂತಸ ತರಬಹುದಿತ್ತು. ವ್ಯಾಮೋಹವನ್ನು ತೊರೆದು ಬಾಳಬೇಕು, ಏನು ಬಂದರೂ ತಾಳಬೇಕು.
4. ವೃಷಭಾಚಲದಲ್ಲಿ ಎಲ್ಲರೂ ಹೆಸರು ಕೆತ್ತಿಸಿದ್ದರಿಂದ ಸೂಕ್ತ ಸ್ಥಳವು ದೊರಕಲಿಲ್ಲ.
5. ಒಗಟುಗಳಲ್ಲಿ ಉತ್ತರವು ಗುಪ್ತವಾಗಿರುತ್ತದೆ. ಮನೋರಂಜನೆ, ವಿನೋದ, ಹಾಸ್ಯ, ವಿಡಂಬನೆಗಳ ಸಾಧನವಾಗಿದೆ. ಬುದ್ಧಿ ಚುರುಕಾಗಿ ವಿಚಾರಶಕ್ತಿ ಬೆಳೆಯುತ್ತದೆ. ಏಕಾಗ್ರತೆ ಬೆಳೆಯುತ್ತದೆ.



Downloaded From : http://cbseportal.com/ Courtesy : CBSE